ಕೂಡಾಣಿಕೆಗೆ ಸಹಕರಿಸಿದ್ದ. ಬರಿಯ ಕೂಡಾಣಿಕೆ ಸಾಲದು ರಿಜಿಸ್ಟ್ರಿ ಆಗಬೇಕು ಎಂದು ಶಿವಮ್ಮ ದಬಾಯಿಸಿದರೂ ಮಾದೇವಣ್ಣ ತಪ್ಪಿಸಿಕೊಳ್ಳುತ್ತಿದ್ದರು. ರಿಜಿಸ್ಟರ್ ಮದುವೆ ಮಾಡಿಸಿಕೊಳ್ಳುವ ಸಲುವಾಗಿ ನಾನು ತೆಗೆದ ಫೋಟೊದಲ್ಲಿ ಎರಡನೆಯ ಮಗ ಶಿವಮ್ಮನ ಹೊಟ್ಟೆಯೊಳಗೆ ಇರುವುದು ಸ್ಪಷ್ಟವಾಗಿ ಎದ್ದು ಕಾಣುತ್ತಿತ್ತು. ಮೊದಲ ಮಗ ತಾಯಿಯ ಕೈಹಿಡಿದುಕೊಂಡು ನಿಂತಿದ್ದ. ಇತ್ತೀಚಿನವರೆಗೂ ಆ ಫೋಟೊದ ಒಂದೇ ಒಂದು ಪ್ರಿಂಟು ನನ್ನ ಬಳಿ ಅನಾಥವಾಗಿ ಬಿದ್ದುಕೊಂಡಿತ್ತು

ಬಹುಶಃ ಮಾದೇವಣ್ಣ ಮತ್ತು ಶಿವಮ್ಮ ನಗುತ್ತಿದ್ದ ಒಂದೇ ಒಂದು ಫೋಟೊ ಅದು. ಉಳಿದೆಲ್ಲವೂ ಗಂಟು ಮುಖದವುಗಳೇ. ಅಷ್ಟೊಂದು ಕಾದಾಡುತ್ತಿದ್ದರು ಮತ್ತು ಒಂದುಗೂಡುತ್ತಿದ್ದರು. ಮಲಯಾಳಿ ಮಾದೇವಣ್ಣನಿಗೆ ಮೂವರು ಮಕ್ಕಳಲ್ಲಿ ಒಬ್ಬ ಸ್ವಾಮಿ ವಿವೇಕಾನಂದರ ಹಾಗೆ ಆಗಬೇಕೆಂದು ಹಠ. ಹಾಗೆ ಅವರು ಅಂದುಕೊಂಡ ಹಾಗೆ ಆಗಿದ್ದರೆ ನಡುವಿನವನು ಸುಭಾಷ್ ಚಂದ್ರ ಬೋಸ್, ಕೊನೆಯವನು ಅಬ್ದುಲ್ ಕಲಾಂ ಆಗಬೇಕಿತ್ತು. ದೊಡ್ಡ ಮಗನನ್ನು ಅದ್ಯಾರದೋ ಕಾಲು ಹಿಡಿದು ರಾಮಕೃಷ್ಣ ಆಶ್ರಮಕ್ಕೆ ಸೇರಿಸಿದ್ದರು. ಅವನು ಆಶ್ರಮ ಶಾಲೆ ಸೇರಿದವನು ಅಲ್ಲಿಯ ಹವಾ ಸರಿಯಾಗದೆ ಅಪ್ಪನ ಜೊತೆ ಟೀ ಮಾರಲು ಸೇರಿಕೊಂಡಿದ್ದ. ಆಮೇಲೆ ಅಪ್ಪನ ಟೀ ಲೆಕ್ಕಾಚಾರ ಕಲಿಯಲಾಗದೆ ಬಳ್ಳೆ ಕಾಡಲ್ಲಿ ಸೋದರ ಮಾವನ ಹೊಲದಲ್ಲಿ ತಂಬಾಕು ಬೆಳೆಯಲು ಹೋಗಿದ್ದ. ಎರಡನೆಯ ಮಗನಿಗೆ ಸೈನಿಕ ಶಾಲೆಯಲ್ಲಿ ಎದೆಯ ಸುತ್ತಳತೆ ಸರಿ ಇಲ್ಲ ಎಂಬ ಕಾರಣಕ್ಕೆ ಸೀಟು ಸಿಗಲಿಲ್ಲ. ಆತ ಮನೆಯಿಂದ ಓಡಿಹೋಗಿ ಯಾವುದೋ ಪಂಕ್ಚರ್ ಸಾಹೇಬರ ಸೈಕಲ್ ಅಂಗಡಿಯಲ್ಲಿ ಕೆಲಸಕ್ಕೆ ಸೇರಿ ಯಾವಾಗಲಾದರೂ ಅಪ್ಪ ಮನೆಯಲ್ಲಿ ಇಲ್ಲದಿರುವಾಗ ಅಮ್ಮ ಶಿವಮ್ಮಳನ್ನು ನೋಡಿ ಹೋಗುತ್ತಿದ್ದ. ಕೊನೆಯ ಮಗ ಅಪ್ಪನ ಮಾತನ್ನು ಅನುಸರಿಸಿ ವಿಜ್ಞಾನಿಯಾಗಲು ಶತಪ್ರಯತ್ನ ಮಾಡುತ್ತಿದ್ದ. ಆದರೆ ಇಂಗ್ಲಿಷ್ ವಿಷಯದಲ್ಲಿ ಮತ್ತೆ ಮತ್ತೆ ಅನುತ್ತೀರ್ಣನಾಗಿ ಅಮ್ಮನ ಜೊತೆ ಸಯ್ಯಾಜಿರಾವ್ ರಸ್ತೆಯಲ್ಲಿ ತಾನೂ ನಿಂಬೆಕಾಯಿಗಳನ್ನು ಗುಡ್ಡೆ ಹಾಕಿಕೊಂಡು ಮಾರಲು ಕೂತಿದ್ದ.

'ಏನು ಮಾಡಿದರೂ ಈ ಕರ್ನಾಟಕದಲ್ಲಿ ಕ್ರಾಂತಿ ಆಗುವುದಿಲ್ಲ' ಎಂದು ಮಲಯಾಳಿ ಮಾದೇವಣ್ಣ ಕೊನೆಯ ಬಾರಿ ಸಿಕ್ಕಿದಾಗ ಅಂದಿದ್ದರು.

ಆಗ ಅವರಿಗೆ ಹೃದಯದ ತೊಂದರೆ ಬೇರೆ ಮತ್ತೆ ಶುರುವಾಗಿತ್ತು. 'ನನ್ನ ದೇಹದ ಅವಯವಗಳು ಇಲ್ಲಿ ಯಾರಿಗೂ ಸರಿ ಹೋಗುವುದಿಲ್ಲ, ಸ್ವಂತ ಮಕ್ಕಳಿಗೇ ನನ್ನ ಬೆಲೆ ಗೊತ್ತಿಲ್ಲ. ಅಲ್ಲೇ ತಿರುವನಂತಪುರ ಮೆಡಿಕಲ್ ಕಾಲೇಜಿಗೆ ದೇಹವನ್ನು ದಾನ ಕೊಡಬೇಕು' ಎಂದು ನೊಂದು ನುಡಿದಿದ್ದರು. ಶಿವಮ್ಮನಿಗೂ ಅವರ ಕುರಿತು ಬಹಳ ದೂರುಗಳಿದ್ದವು.

ಅಣ್ಣಯ್ಯನಿಗೂ ಬೇಸರವಾಗಿತ್ತು. ಎಲ್ಲವೂ ಸರಿ ಹೋದರೆ ಮಕ್ಕಳು ಬೆಳೆದು ದೊಡ್ಡವರಾದರೆ ಹಾಡಿಯಲ್ಲಿ ಆತನಿಗೆ ಒಂದು ತಾರಸಿಯ ಮನೆ ಕಟ್ಟಿಕೊಟ್ಟು ಅದರ ಪಕ್ಕದಲ್ಲೇ ತಾವೂ ಒಂದು ಮನೆ ಕಟ್ಟಿಕೊಂಡು ಅವರ ಜೊತೆಯಲ್ಲೇ ವನವಾಸಿಯಾಗಿ ಬದುಕುತ್ತೇನೆ ಎಂದಿದ್ದ ಮಲಯಾಳಿ ಮಾದೇವಣ್ಣ ಆತನಿಗೂ ಕೈಕೊಟ್ಟು ಹೋಗಿದ್ದರು.

'ನಾನು ನಿಜವಾಗಿಯೂ ಹೋಗುತ್ತಿರುವುದು ಯಾಕೆ ಎಂದು ಗೊತ್ತಾ?' ಎಂದು ಅವರು ಕಾಣೆಯಾಗುವ ಮೊದಲು ಕೇಳಿದ್ದರು. ಕಿವಿಯ ಹತ್ತಿರ ಬಂದು, 'ಗಂಡಸರು ಸಾಮಾನಿನ ಕೆಲಸ ನಿಂತು ಹೋದ ಮೇಲೆ ಬದುಕಿ ಇರಬಾರದು' ಎಂದಿದ್ದರು. ನಾನು ಇದೇನು ಸಾಮಾನು ಎಂಬಂತೆ ಅವರ ಮುಖ ನೋಡಿದ್ದೆ ಅವರು ಕೈಭಾಷೆಯಲ್ಲಿ ಅದನ್ನು ತೋರಿಸಿದ್ದರು. ಮೂರು ಮಕ್ಕಳ ತಂದೆಯ ದುಃಖ!.

ನಗು ಬಂದಿತ್ತು. ನನ್ನ ಶಾಕುಂತಲೆ ಅವಳನ್ನು ಮುಟ್ಟಲೂ ಬಿಡುತ್ತಿರಲಿಲ್ಲ. ಆದರೆ 'ಮಕ್ಕಳನ್ನು ಕೊಡು ಮೂದೇವಿ' ಎಂದು ಹಂಗಿಸುತ್ತಿದ್ದಳು 'ಆನೆಗೆ ಆನೆಯ ಕಷ್ಟ, ಇರುವೆಗೆ ಇರುವೆಯ ಕಷ್ಟ' ಮನಸಿನಲ್ಲಿಯೇ ಗೊಣಗಿದ್ದೆ

* * *

ಎಷ್ಟೋ ಕಾಲದ ನಂತರ ಯಾವುದೋ ನಂಬರಿನಿಂದ ಮಾದೇವಣ್ಣ ಫೋನ್ ಮಾಡಿದ್ದರು. 'ನಾನುಮಾಧವನ್‌ನಾಯರ್‌ಮಾತನಾಡುತ್ತಿರುವುದು' ಅಂದಿದ್ದರು. ಬಹುಶಃ ಅವರು ಕುಡಿದಿದ್ದರು. 'ಯಾಕೋ ನಾನು ಬೇಗ ಸಾಯುತ್ತಿಲ್ಲ . ಅಲ್ಲಿಯವರೆಗೆ ಮೆಡಿಕಲ್ ಕಾಲೇಜಿನ ಪಕ್ಕದಲ್ಲೇ ಬಾಡಿಗೆಗೆ ಪಡೆದು ಕೊಂಡಿರುವ ಕೋಣೆಯ ಬಾಡಿಗೆ ಕಟ್ಟಲು ಕಾಸಿಲ್ಲ'